


# ನಿಖಿಲ್ ಈಗ ಯದುವೀರ

ಬಾಕ್ಸ್ ಆಫೀಸಿನಲ್ಲಿ ಗೆಲುವು ಮರೀಚಿಕೆಯೇ ಆದರೂ ನಿಖಿಲ್ ಗೌಡ ಅವರ ಸಿನಿಮಾಗಳು ಮಾತ್ರ ಒಂದಾದಮೇಲೆ ಇನ್ನೊಂದು ಸೆಟ್ಟೇರುತ್ತಿವೆ. ಅದ್ದೂರಿಯಾಗಿ ನಿರ್ಮಾಣವೂ ಆಗುತ್ತಿವೆ.

ನಿಖಿಲ್ ಈಗ 'ಯದುವೀರ'ನಾಗಿದ್ದಾರೆ. 'ಯದುವೀರ' ಎನ್ನುವುದು ಅವರ ಐದನೇ ಸಿನಿಮಾದ ಶೀರ್ಷಿಕೆ. ಕೆವಿಎನ್ ಪ್ರೊಡಕ್ಷನ್ ಹೌಸ್ ಅಡಿಯಲ್ಲಿ ಈ ಸಿನಿಮಾ ನಿರ್ಮಾಣವಾಗುತ್ತಿರುವುದು ಇನ್ನೊಂದು ವಿಶೇಷ. ಚಿತ್ರದ ಟೈಟಲ್ ಜೊತೆಗೆ ಫಸ್ಟ್ ಲುಕ್ ಕೂಡ ಚಿತ್ರತಂಡ ಬಿಡುಗಡೆ ಮಾಡಿದೆ.

'ಮಾಸ್ಟರ್ ಪೀಸ್', 'ಮಫ್ತಿ' ಯಂಥ ಸಿನಿಮಾಗಳ ನಿರ್ದೇಶನ ತಂಡದಲ್ಲಿ ಕೆಲಸ ಮಾಡಿದ್ದ ಮಂಜು ಅಥರ್ವ 'ಯದುವೀರ'ನಿಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ, ನವೀನ್ ಕ್ಯಾಮೆರಾ ಕೆಲಸ ಈ ಚಿತ್ರಕ್ಕಿದೆ. ಭರ್ಜರಿ ಆ್ಯಕ್ಷನ್ ಮತ್ತು ಫ್ಯಾಮಿಲಿ ಎಂಟರ್‌ಟೈನಿಂಗ್ ಅಂಶಗಳನ್ನು ಹೊಂದಿರುವ ಈ ಚಿತ್ರದ ಚಿತ್ರದ ಚಿತ್ರೀಕರಣ ಈಗಾಗಲೇ ಆರಂಭವಾಗಿದೆ. ■

# 19.20.21 ಇದು ಮಂಸೋರೆ ಹೊಸ ಸಾಹಸ

'ಆ್ಯಕ್ಟ್ 1978' ಸಿನಿಮಾ ನಂತರ ಮಂಸೋರೆ ಬಿಗ್ ಬಜೆಟ್‌ನಲ್ಲಿ ರಾಣಿ ಅಬ್ಬಕ್ಕನ ಬದುಕನ್ನು ಆಧರಿಸಿದ ಸಿನಿಮಾ ಮಾಡುತ್ತಿರುವುದಾಗಿ ಸುದ್ದಿಯಾಗಿತ್ತು. ದಕ್ಷಿಣ ಭಾರತದ ಖ್ಯಾತ ನಟಿಯೊಬ್ಬರು ಆ ಸಿನಿಮಾದಲ್ಲಿ ನಟಿಸಲು ಮುಂದೆ ಬಂದಿರುವುದಾಗಿಯೂ ಅವರು ಆಪ್ತರೊಟ್ಟಿಗೆ ಹೇಳಿಕೊಂಡಿದ್ದರು. ಆದರೆ ಈಗ ತಮ್ಮ ಹೊಸ ಸಿನಿಮಾ ಶೀರ್ಷಿಕೆ ಬಿಡುಗಡೆ ಮಾಡಿರುವ ಮಂಸೋರೆ ಅದಕ್ಕೆ, '19.20.21' ಎಂದು ಹೆಸರಿಟ್ಟಿದ್ದಾರೆ. ದಿನಾಂಕವೊಂದರಂತೆ ಕಾಣುವ ಈ ಶೀರ್ಷಿಕೆಯ ಮರ್ಮ ಏನು ಎಂಬ ಬಗ್ಗೆ ಅವರು ಗುಟ್ಟು ಬಿಟ್ಟುಕೊಟ್ಟಿಲ್ಲ. 'ಹತ್ತೊಂಬತ್ತು, ಇಪ್ಪತ್ತು, ಇಪ್ಪತ್ತೊಂದು ಎಲ್ಲರ ಬದುಕಿನ ಬಹುಮುಖ್ಯವಾದ ಸಂಖ್ಯೆಗಳು. ಅದು ಹೇಗೆ ಏನು? ಅವುಗಳ ಅರ್ಥವೇನು ಎಂಬುದನ್ನು ತೆರೆಯ ಮೇಲೆಯೇ ನೋಡಿ ತಿಳಿದುಕೊಳ್ಳಿ' ಎಂದು ಕುತೂಹಲದ ಒಗ್ಗರಣೆಯನ್ನು ಹಾಕಿದ್ದಾರೆ.

ಟೈಟಲ್ ಜೊತೆಗೆ ಒಂದು ಪೋಸ್ಟರ್ ಅನ್ನೂ ಮಂಸೋರೆ ಜಾಹೀರು ಮಾಡಿದ್ದು ಅದೂ ಅಷ್ಟೇ ಕುತೂಹಲವನ್ನು ಹುಟ್ಟಿಸುವಂತಿದೆ. ಒಬ್ಬ ವ್ಯಕ್ತಿಯ ಮೈ ತುಂಬ ಟೇಪ್ ಹಚ್ಚಿಕೊಂಡು ನಿಂತಿರುವ ಚಿತ್ರವದು. ಆ ಟೇಪಿನ ತುಂಬೆಲ್ಲ ಸಾಮಾಜಿಕ ನ್ಯಾಯ, ವ್ಯವಸ್ಥೆಯ ಕಡೆಗೆ ಗಮನ ಸೆಳೆಯುವ ಶಬ್ದಗಳಿವೆ. ಅಂದರೆ 'ಆ್ಯಕ್ಟ್ 1978'ನ ಹಾಗೆಯೇ ಇದೂ ವ್ಯವಸ್ಥೆಯ ವಿರುದ್ಧ ನ್ಯಾಯಕ್ಕಾಗಿ ಹೋರಾಡುವ ವ್ಯಕ್ತಿಯ ಕಥೆಯೇ? ಈ ಪ್ರಶ್ನೆಗೆ ನಿರ್ದೇಶಕರಂತೂ ಉತ್ತರಿಸುವುದಿಲ್ಲ.

ಮಂಸೋರೆ ಅವರು ಹೇಳುವ ಪ್ರಕಾರ, ಇದೊಂದು ಸತ್ಯ ಘಟನೆ ಆಧರಿಸಿದ ಸಿನಿಮಾ. ತುಂಬ ಹಿಂದಿನಿಂದಲೂ ಅವರ ಮನಸಿನಲ್ಲಿ ಕಾವು ಪಡೆಯುತ್ತಿದ್ದ ಘಟನೆಯೊಂದಕ್ಕೆ ಈಗ ಸಿನಿಮಾ ಆಗುವ ಗಳಿಗೆ ಕೂಡಿಬಂದಿದೆ. ಇನ್ನಷ್ಟೇ ಚಿತ್ರಕ್ಕೆ ತಾರಾಬಳಗ ಮತ್ತು ತಾಂತ್ರಿಕ ಬಳಗವನ್ನು ಆಯ್ಕೆ ಮಾಡಬೇಕಿದೆ.

ಹಾಗಾದರೆ 'ಅಬ್ಬಕ್ಕ' ಸಿನಿಮಾ ಏನಾಯ್ತು? ಈ ಪ್ರಶ್ನೆಗೆ ಮಂಸೋರೆ 'ಇನ್ನಷ್ಟು ಕಾಯಿರಿ' ಎಂದು ಹೇಳುತ್ತಾರೆ. ಕೊರೊನಾ ಕಾರಣಕ್ಕೆ ಚಿತ್ರ ಮುಂದಕ್ಕೆ ಹೋಗಿದೆ. ಕೆಲ ಸಮಯದ ನಂತರ ಮತ್ತೆ ಆ ಚಿತ್ರದ ಕೆಲಸದಲ್ಲಿ ತೊಡಗಿಕೊಳ್ಳುತ್ತೇವೆ ಎನ್ನುವುದು ಅವರ ಸಮಜಾಯಿಷಿ. ■

